- - ಅಸಲು ದಾವೆ ಸಂ**: 42/2023** ಪಿ **.**ಡಬ್ಲು**-3**

**ದಿ: 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಬಿ ಹೆಚ್ ವಕೀಲರಿಂದ: -**

1. ಜುಬಲೇಸಾಬ ಹೆಸರಿಗೆ ಆಗಿರುವ ಮುಟೇಶನ್ ನಂಬರ್ ಮತ್ತು ವರ್ಷ ನನಗೆ ಗೊತ್ತಿಲ್ಲ. ದಿನಾಂಕ: 30-05-2023 ರಂದು ದಾವಾ ಆಸ್ತಿಯಲ್ಲಿ ಅಡೆತಡೆ ಮಾಡಿದ್ದಾರೆ ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಅಡೆತಡೆ ಮಾಡಿಲ್ಲ ಎನ್ನುತ್ತಾರೆ. ದಾವಾ ಹೊಲ ಹಳೆ ಸ ನಂ 133/*/4 ಈಗ ಹೊಸ ಸ ನಂ 133/*/8 ಖರಾಬ ತೆಗೆದು ಈಗ 02 ಎಕರೆ 08 ಗುಂಟೆ ಆಗಿದೆ

ಎಂದರೆ ನನಗೆ ಗೊತ್ತಿಲ್ಲ. ವಾದಿ ಈಗ 02 ಎಕರೆ 08 ಗುಂಟೆ ಜಮೀನಿನ ಕಬ್ಜಾದಲ್ಲಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಸ ನಂ 133/*/4, 02 ಎಕರೆ 31 ಗುಂಟೆ ಹೊಲದಲ್ಲಿ ಸೋಫಿಸಾಬ ಗೆ 01 ಎಕರೆ 18 ಗುಂಟೆ ಮತ್ತು ಪ್ರತಿವಾದಿಗೆ 01 ಎಕರೆ 16 ಗುಂಟೆ ಹೊಲ ಹೋಗಿದೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎನ್ನುತ್ತಾರೆ. ಕಾಸಿಂಸಾಬ ನಿಗೆ 02 ಎಕರೆ 31 ಗುಂಟೆ ಭಾಗ ಬಂದಿದೆ ಮತ್ತು ಸಣ್ಣ ಸೋಫಣ್ಣನ ಭಾಗಕ್ಕೆ 02 ಎಕರೆ 31 ಗುಂಟೆ ಭಾಗ ಬಂದಿದೆ ಅವರ ಭಾಗಕ್ಕೆ ಬಂದಿರುವ ಜಮೀನನ್ನು ಸೋಫಿಸಾಬ 01 ಎಕರೆ 18 ಗುಂಟೆ ಮತ್ತು ಪ್ರತಿವಾದಿ 01 ಎಕರೆ 16 ಗುಂಟೆ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ಹೆಸರಿಗೆ ಆಗಿರುವ 01 ಎಕರೆ 16 ಗುಂಟೆ ಜಮೀನಿನಲ್ಲಿ ಖರಾಬ ತೆಗೆದು 01 ಎಕರೆ 04 ಗುಂಟೆ ಸ ನಂ 133/4 ಆಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಣ್ಣ ಸೋಪಣ್ಣನ ಭಾಗಕ್ಕೆ ಬಂದಿರುವ 02 ಎಕರೆ 31 ಗುಂಟೆ ಜಮೀನು ನಮ್ಮದು ಎಂದು ವಾದಿ ರಾಯಚೂರಿನಲ್ಲಿ ಸೋಫಿಸಾಬ ಮತ್ತು ಪ್ರತಿವಾದಿಯ ವಿರುದ್ದ ಕೇಸ್ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಸೋಫಿಸಾಬನನ್ನು ಹೊರತುಪಡಿಸಿ ಪ್ರತಿವಾದಿಯ ವಿರುದ್ದ ಈ ನ್ಯಾಯಾಲಯದಲ್ಲಿ ದಾವಾ ಸಲ್ಲಿಸಿರುವುದು ಕಾನೂನುಬಾಹಿರವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಸೇರಿದ 01 ಎಕರೆ 04 ಗುಂಟೆ ಹೊಲಕ್ಕೆ ವಾದಿಯಾಗಲಿ ಮತ್ತು ಅವರ ಮಕ್ಕಳಾಗಲಿ ಯಾರು ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸ ನಂ 133/*/8, ವಿಸ್ತೀರ್ಣ 02 ಎಕರೆ 08 ಗುಂಟೆ ವಾದಿ ಬಂದಮ್ಮ ಸಾಗುವಳಿದಾರಳು ಮತ್ತು ಕಬ್ಜಾದಾರಳು ಇದ್ದಾಳೆ ಎಂದರೆ ಸಾಕ್ಷಿಯು ಇಲ್ಲ 02 ಎಕರೆ 31 ಗುಂಟೆ ಸಾಗುವಳಿಯಲ್ಲಿದ್ದಾರೆ ಎನ್ನುತ್ತಾರೆ. ನಿಮಗೆ ಈ ದಾವೆಯ ಬಗ್ಗೆ ಏನೂ ಗೊತ್ತಿಲ್ಲ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ